‘ಸರಿ ಪುಟ್ಟಿ... ಫೋಟೊ ಕಳಿಸಿ ಮಲಕ್ಕೋ...’

ನಾನಂತೂ ಇದ್ದಲ್ಲೇ ಘನೀಭವಿಸಿ ಹೋದೆ!

ಹಾಳು ಮನಸ್ಸು, ಇವಳಿಗೂ ಮತ್ತು ಇವಳು ಮೆಚ್ಚಿರುವ ಅವನಿಗೂ ಇರಬಹುದಾದ ರಕ್ತಸಂಬಂಧವನ್ನು ಎಣಿಸೆಣಿಸಿ ಲಾಳಿಹೊಡೆಯಿತು. ಈ ಸಂಬಂಧಕ್ಕೊಂದು ಹೆಸರು ಕೊಡುವುದಾದರೆ ಇವಳು ಅವನಿಗೆ ಏನಾಗಬಹುದು? ತಿಳಿಯದೆ ಕಂಗೆಟ್ಟೆ. ಅಷ್ಟರಲ್ಲಿ ನೀಲಿ, ಮೊಬೈಲಿನಲ್ಲಿ ಹುಡುಗನ ಫೋಟೋವನ್ನು ತೆರೆದು ನನ್ನ ಕಣ್ಣಿಗೊಡ್ಡಿದರು. ಯಾಕೋ ಏನೋ, ಹುಡುಗ ಒಂದಿಷ್ಟೂ ಚೆನ್ನನಿಸಲಿಲ್ಲ. ವಿಪರೀತ ಗಾತ್ರದ ಮೈಯಿ. ಅಡಿಯಿಂದ ಮುಡಿಯವರೆಗೂ ಉಬ್ಬಿಲ್ಲ, ತಗ್ಗಿಲ್ಲ! ಒಂದೇ ಅಳತೆಯ ಊತ!! ಹಿಮ್ಮೆಟ್ಟಿಹೋದೆ. ತೆಳ್ಳನೆ ತಳಿರಿನಂತಿರುವ ನನ್ನ ಮಗಳಿಗೂ, ಮರದ ಬೊಡ್ಡೆಯಂತಿರುವ ಇವನಿಗೂ ಎಲ್ಲಿಯ ಸಾಮ್ಯ?!

‘ನೀಲಿ... ನೀಲಿ...’ ಗಂಡನನ್ನು ಥಟಕ್ಕನೆ ತಿವಿದು ಹೇಳಿದೆ. ‘ಯಾಕೋ ಸರಿ ಅನಿಸುತಾ ಇಲ್ಲ, ಕಣ್ರೀ... ಗಿಣಿಯಂತಹ ಇವಳನ್ನ ಈ ಗಿಡುಗಕ್ಕೆ ಒಡ್ಡೋದೇನ್ರೀ?’ ಅಳು ಮುಂದಾಗಿಬಂದಿತು.

ನೀಲಿ, ತಕ್ಷಣ ತುಟಿಯ ಮೇಲೆ ತೋರುಬೆರಳಿಕ್ಕಿ, ‘ಶ್ಶ್... ಮೆಲ್ಲ... ಮೆಲ್ಲ...’ ಎಂದು ಪಿಸುಗುಟ್ಟಿ, ಮಂಚದಿಂದಿಳಿದು ಚಿನ್ನುವಿನ ರೂಮಿನವರೆಗೂ ಸದ್ದಿರದೆ ನಡೆದು, ಅದೇ ಕಳ್ಳಹೆಜ್ಜೆಯಲ್ಲಿ ವಾಪಸಾಗಿ, ನಮ್ಮ ಕೋಣೆಯ ಬಾಗಿಲನ್ನು ಮೆಲ್ಲಗೆ ಮುಂದೆ ನೂಕಿ– ‘ಹ್ಞೂಂ... ನನಗೂ ಹಾಗೇ ಅನಿಸಿದ್ದು ಹೌದು. ಆದರೆ ಅವಳ ಆಯ್ಕೆ ಮತ್ತು ಇಚ್ಛೆ. ತಪ್ಪಿಸೋಕೆ ನಾನು ನೀನು ಯಾರು?’ ಎಂದು, ಮತ್ತದೇ ಮೆಲುದನಿಯಲ್ಲಿ ಹೇಳಿ ನಿಟ್ಟುಸಿರು ದಬ್ಬಿದರು.

‘ಇನ್ನೂ ಒಂದು ವಿಷಯರೀ... ಶೇಷೂ ತಾತ ನಮ್ಮಮ್ಮನಿಗೆ ದೊಡ್ಡಪ್ಪ ಅಂದರೆ ಅವರ ಮೊಮ್ಮಗ ವಾರಗೆಯಲ್ಲಿ ಇವಳಿಗೇನಾಗಬೇಕು ಹೇಳಿ!’

ನೀಲಿ ಮನಸೊಳಗೇ ಲೆಕ್ಕಾಚಾರ ಮಾಡಿ, ‘ವಾರಿಗೇಲಿ ಇವಳು ಅವನಿಗೆ ಮಗಳಾಗಬೇಕಲ್ಲವಾ?’ ಅಂತಂದರು.

ಹೌಹಾರಿದೆ. ‘ಮತ್ತೆ ಇದು ಸರಿ ಏನ್ರೀ? ಯಾಕೋ ಚೆನ್ನನಿಸುತಿಲ್ಲ...’

‘ಅಯ್ಯೋ ಆ ಮಾತು ಬೇಡ ಬಿಡು...’ ನೀಲಿ ತುಸು ಯೋಚಿಸಿ ಹೇಳಿದರು. ‘ಈಗ ನಿಮ್ಮಮ್ಮ ಬೇರೆ ಮನೆಗೆ ಸೇರಲಿಲ್ಲವಾ? ನೀನೂ ಬೇರೆ ಮನೆ ಅಲ್ಲವಾ? ಹೆಣ್ಣು ಸ್ವಕುಲದ ಹೊಸಿಲು ದಾಟಿದ ಮೇಲೆ, ರಕ್ತದ ಹಂಚಿಕೆಯಿಂದ ದೂರವೇನೇ... ಅಲ್ಲದೆ, ಗೋತ್ರವೂ ಬೇರೆ ಇದ್ದೀತಲ್ಲವಾ?’ ಅಂತಂದು, ‘ಈಗ ನಾವು ಮಾಡಬೇಕಾಗಿರೋದು ಒಂದೇನೇ... ಇವಳ ಆಯ್ಕೆ ನಮ್ಮದೂ ಹೌದು ಅಂತ ಒಪ್ಪಿಕೊಳ್ಳೋದು...’ ಎಂದು ನಿರುಮ್ಮಳದಿಂದ ಹೇಳಿ, ಹೊದ್ದು ಮಲಗಿಯೇ ಬಿಟ್ಟರು. ಕೆಲಹೊತ್ತಿಗೆಲ್ಲ ಗೊರಕೆಯೂ ಸುರುವಾಯಿತು!

ಅಯ್ಯೋ ಗಂಡದೇವರೇ... ಅಂದುಕೊಂಡೆ. ಸುಮ್ಮನೆ ಕಂಗೆಟ್ಟಿದ್ದು ನಾನೇ. ನಾನೇ ನಾನಾದ ನಾನು ಮಾತ್ರ!

ರಾತ್ರಿಯೆಲ್ಲ ಅತ್ತಿತ್ತ ಮಗ್ಗುಲು ಬದಲಿಸುತ್ತ, ಆಚೀಚೆ ಹೊರಳಿಕೊಂಡೇ ಕಳೆದೆ. ನನಗೇ ನನ್ನ ಗಂಡನನ್ನು ಆಯಲಾಗಲಿಲ್ಲ, ಇನ್ನು ಮಗಳ ಹುಡುಗನನ್ನು ಆಯಲುಂಟೆ... ಎಂದು ಸಮಾಧಾನ ಹೇಳಿಕೊಂಡರೂ, ಈ ಭಾಗ್ಯವೂ ತಪ್ಪಿಹೋಯಿತಲ್ಲ... ಎಂದು ಲೊಚಗುಟ್ಟಿದೆ. ನಡುವೆ ಒಂಡೆರಡು ಸರ್ತಿ ನೀಲಿಯನ್ನು ತಿವಿದೆಬ್ಬಿಸಿ ಅತ್ತೆ. ‘ಸುಮ್ಮನಿರು, ಕನಕಮ್ಮಾ... ಎಲ್ಲಾ ಸರಿ ಹೋಗುತ್ತೆ. ನಿನಗೆ ಮಗಳ ಭವಿಷ್ಯ ಮುಖ್ಯವೋ? ನಮ್ಮ ಹಟ ಮುಖ್ಯವೋ...’ ಎಂದು ಸಂತೈಸಿದರು. ಮರುದಿನದ ಬೆಳಕು ಹುಟ್ಟುವ ಹೊತ್ತಿಗೆ, ಆಗಿದ್ದಾಗಲಿ... ಚಿನ್ನು ಖುಷಿಯಿಂದಿದ್ದರೆ